# <u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>

## ಸಿ.ಸಿ. ಸಂಖ್ಯೆ: 235/23

**ಸಾಕ್ಷಿಯನ್ನು ದಿಃ 02.07.2024 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ವಿಕ್ಟೋರಿಯಾ | ಸಿ.ಡಬ್ಲ್ಯೂ: **2** | ಪಿ.ಡಬ್ಲ್ಯೂ: **1** |
| ಗಂಡನ ಹೆಸರು | ಫಿಲಿಪ್ಸ್ | | |
| ವಯಸ್ಸು | **42** ವರ್ಷ | | |
| ಕೆಲಸ | ಗೃಹಿಣಿ | | |
| ವಾಸಸ್ಥಳ | ಹುಣಸೂರು | | |

## <u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>

1. ಚಾಸಾ-1 ನನ್ನ ತಾಯಿ, ಚಾಸಾ-3 ನನ್ನ ಮಗ,ಚಾಸಾ-4 ನನ್ನ ಗಂಡ. ಚಾಸಾ-5 ರಿಂದ 7 ರವರ ಪರಿಚಯ ಇದೆ. ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ಇದೆ. ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ದಾಖಲೆ ಮಹಜರ್ ಆಗಿದ್ದು ಅದನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಎರಡು ಭಾವಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು **(ಒಟ್ಟಾಗಿ)** ನಿಪಿ.2 ಎಂದು ಗುರುತಿಸಲಾಯಿತು. ನಾನು ಪೊಲೀಸರಿಗೆ ಘಟನೆ ಸಂಬಂಧ ಹೇಳಿಕೆ ನೀಡಿರುತ್ತೇನೆ.

2. ದಿಃ 31.01.2023 ರಂದು ರಾತ್ರಿ 10.00 ಗಂಟೆ ಸಮಯ ನಾನು, ನನ್ನ ಗಂಡ ಚಾಸಾ-4, 3,1 ರವರು ಸೇರಿ ಊಟ ಮಾಡುತ್ತಿರುವಾಗ, ಚಾಸಾ-3 ರವರು ಊಟ ಮುಗಿಸಿ ವಾಕ್ ಮಾಡಲೆಂದು ಮನೆಯಿಂದ ಹೊರಗಡೆ ಹೋದನು. ಹೊರಗೆ ಹೋದ ತಕ್ಷಣ ಚಾಸಾ-3 ರವರು ಜೋರಾಗಿ ಕಿರುಚಿದಾಗ ನಾವೆಲ್ಲಾ ಮನೆಯಿಂದ ಹೊರಗೆ ಬಂದು ನೋಡಿದಾಗ ಆರೋಪಿ ತನ್ನ ಸ್ಕೂಟಿ ಜೊತೆ ಮನೆ ಮುಂದುಗಡೆ ನಿಂತಿದ್ದರು. ಆಗ ನಾನು ನನ್ನ ಮಗ ಚಾಸಾ-3 ರವರನ್ನು ಏನಾಯಿತು ಎಂದು ಕೇಳಿದಾಗ ಆರೋಪಿಯು ವಾಹನದಲ್ಲಿ ವೇಗವಾಗಿ ಬಂದು ಗುದ್ದಲು ಪ್ರಯತ್ನಿಸಿದರು ಎಂದು ಹೇಳಿದ. ಆಗ ನಾನು ಆರೋಪಿಯನ್ನು ಏಕೆ ಹೀಗೆ ಮಾಡುತ್ತೀಯಾ ಎಂದು ಕೇಳಿದಾಗ

ಆರೋಪಿಯು ನನಗೆ ಅವಾಚ್ಯ ಶಬ್ದಗಳಾದ ಲೋಫರ್ ಮುಂಡೆ, ಸೂಳೆ ಮುಂಡೆ ಎಂದು ಬೈದರು. ಆಗ ಚಾಸಾ-4,ನನ್ನ ಗಂಡ ಏಕೆ ಈ ರೀತಿ ಮಾತನಾಡುತ್ತೀಯಾ, ಈಗ ನೀನು ಕುಡಿದಿದ್ದೀಯಾ ಮನೆಗೆ ಹೋಗು ಬೆಳಿಗ್ಗೆ ಮಾತನಾಡೋಣ ಎಂದು ಹೇಳಿದರು.

3. ಆಗ ನನ್ನ ಗಂಡನನ್ನು ಆರೋಪಿಯು ಕೆಳಗೆ ತಳ್ಳಿ ಕೈಯಿಂದ ಮುಖಕ್ಕೆ ಬೆನ್ನಿಗೆ ಹೊಡೆದು ನೋವುಂಟು ಮಾಡಿದರು. ಆಗ ನಾನು ಬಿಡಿಸಲು ಹೋದಾಗ ಆರೋಪಿಯು ನನ್ನ ಮುಖಕ್ಕೆ, ಬೆನ್ನಿಗೆ ಕೈಗೆ ಹೊಡೆದು ನೋವುಂಟು ಮಾಡಿದರು. ನಂತರ ನನ್ನ ಚೂಡಿದಾರ್ ಟಾಪ್ ಹಿಡಿದು ಎಳೆದಾಡಿ ಮುಂಭಾಗ ಹರಿದು ಹಾಕಿ, ನನ್ನ ಮಾನಭಂಗ ಮಾಡಲು ಪ್ರಯತ್ನ ಮಾಡಿದಾಗ ನನ್ನ ಅಮ್ಮ ಚಾಸಾ-1 ರವರು ಅಲ್ಲಿಗೆ ಬಟ್ಟೆ ತೆಗೆದುಕೊಂಡು ನನ್ನ ಮೈಯನ್ನು ಮುಚ್ಚಲು ಬಂದರು. ಆಗ ನನ್ನ ಅಮ್ಮನಿಗೆ ಆರೋಪಿಯು ತನ್ನ ಜೇಬಿನಿಂದ ಪೆನ್ನಿನ ತರಹ ಇರುವ ಚಾಕುವನ್ನು ತೆಗೆದು ಚಾಸಾ-1 ರವರ ಬಲಗೈ ಮುಂಗೈಗೆ ಚುಚ್ಚಿದರು. ಆ ಸಮಯದಲ್ಲಿ ಚಾಸಾ-5 ರವರು ಬಂದು ಸಮಾಧಾನಪಡಿಸಿ ಆರೋಪಿಯನ್ನು ಅಲ್ಲಿಂದ ಕಳುಹಿಸಿರುತ್ತಾರೆ. ಆಗ ಆರೋಪಿಯು ಅಲ್ಲಿಂದ ಹೋಗುವ ಸಮಯದಲ್ಲಿ ಇನ್ನೊಂದು ಬಾರಿ ನನ್ನ ತಂಟೆಗೆ ಬಂದರೆ ನಿಮ್ಮನ್ನು ಕೊಲೆ ಮಾಡುತ್ತೀನಿ ಒಬ್ಬರನ್ನು ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿದರು.

4. ನಂತರ ಚಾಸಾ-1 ಹಾಗೂ ನನ್ನನ್ನು ಊರಿನವರು ಹಾಗೂ ಚಾಸಾ-5 ರವರು ಹುಣಸೂರು ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಅಲ್ಲಿಂದ ಚಿಕಿತ್ಸೆ ಪಡೆದುಕೊಂಡು ಮನೆಗೆ ಬಂದು, ಮಾರನೆ ದಿನ ಚಾಸಾ-1 ರವರಿಗೆ ನೋವು ಜಾಸ್ತಿಯಾದ ಕಾರಣ ಪುನಃ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಕೊಡಿಸಿದೇವು. ನಂತರ ಘಟನೆ ಸಂಬಂಧ ಚಾಸಾ-1 ರವರು ದೂರು ನೀಡಿರುತ್ತಾರೆ.

5. ದಿಃ 02.02.2023 ರಂದು ಪೊಲೀಸರು ನಾನು ಸ್ಥಳ ತೋರಿಸಿದ ಮೇರೆಗೆ ಬೆಳಿಗ್ಗೆ 9.00 ರಿಂದ 10 ರವರೆಗೆ ಮಹಜರ್ ಮಾಡಿ, ಸದರಿ ಘಟನಾ ಸ್ಥಳದಲ್ಲಿ

ಪೊಲೀಸರು ಆರೋಪಿ ಹರಿದು ಹಾಕಿದ ನನ್ನ ಚೂಡಿದಾರ್ ಟಾಪ್ ಅಮಾನತ್ತುಪಡಿಸಿಕೊಂಡು ಅದನ್ನು ಪೊಲೀಸರು ಬಿಳಿ ಬಟ್ಟೆಯಿಂದ ಸೀಲು ಮಾಡಿ ಆರ್ ಎಂಬ ಅಕ್ಷರದಿಂದ ಮೊಹರು ಮಾಡಿ, ನನ್ನ ಹಾಗೂ ಚಾಸಾ–6,7 ರವರ ಸಹಿಯನ್ನು ಅದೇ ಸ್ಥಳದಲ್ಲಿ ಪಡೆದಿರುತ್ತಾರೆ. ಚಾಸಾ–1 ರವರು ಧರಿಸಿದ್ದ ಹರಿದಿರುವ ನೈಟಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು.ಮಾ–1 ಎಂದು ಹಾಗೂ ಚಾಸಾ–2 ರವರ ಹರಿದಿರುವ ಚೂಡಿದಾರ್ ಟಾಪ್ ಅನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು.ಮಾ–2 ಎಂದು ಗುರುತಿಸಲಾಯಿತು. ನಾನು ಗಲಾಟೆ ಸಂಬಂಧ ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿರುತ್ತೇನೆ. ಸರಿಯಾದ ದಿನಾಂಕ ನನಗೆ ನೆನಪಿರುವುದಿಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಇದೆ.

(ಜೈಬುನ್ನಿಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ. ಎಂ. ಎಫ್. ಸಿ. , ಹುಣಸೂರು.